

ಕನ್ನಡನೂ ಬರತ್ತೆ, ಇಂಗ್ಲಿಷೂ ಬರತ್ತೆ ಎಂಬ ಕಾರಣಕ್ಕೆ ಭಾಷಾಂತರ ಮಾಡಲಿಕ್ಕೆ ಹೋದರೆ ಅದು ಅಸೈನ್ಮೆಂಟ್ ರೈಟಿಂಗ್ ಥರ ಆಗಿಬಿಡುತ್ತದೆ. ಅದೂ ಚೆನ್ನಾಗಿ ಆಗಿದ್ದರೂ ಕೂಡ ನಮ್ಮ ಹೆಚ್ಚಿನ ಓದುಗರಿಗೆ ಅನುವಾದಗಳನ್ನು ಓದುವುದರ ಬಗ್ಗೆ ಅಂಥ ಆಕರ್ಷಣೆ ಇದ್ದಂತಿಲ್ಲ. ಆದರೆ ಜನಪ್ರಿಯ ಲೇಖಕರು ಅನುವಾದ ಮಾಡಿದಾಗ ಆ ಲೇಖಕನನ್ನು ಇಷ್ಟಪಡುವ ಓದುಗ 'ಓ ಇದನ್ನು ಇವರು ಮಾಡಿದ್ದಾರಲ್ವಾ' ಎಂಬ ಕುತೂಹಲಕ್ಕಾದರೂ ತೆಗೆದುಕೊಂಡು ಓದ್ತಾನೆ. ಅನುವಾದಕ ತಾನು ಅನುವಾದಿಸುತ್ತಿರುವ ಭಾಷೆಯಲ್ಲಿ ನುರಿತ ಲೇಖಕನಾಗಿರಬೇಕು.

ನಮ್ಮ ಸಾಹಿತ್ಯ ಅಕಾಡೆಮಿಗಳು, ನ್ಯಾಷನಲ್ ಬುಕ್ ಟ್ರಸ್ಟ್ ಇವುಗಳಿಂದೆಲ್ಲ ಭಾಷಾಂತರಗಳು ನಡೆಯುತ್ತಲೇ ಇವೆ. ಆದರೆ ಅಲ್ಲಿನ ಕ್ವಾಲಿಟಿ ಕಂಟ್ರೋಲ್ ಇನ್ನಷ್ಟು ಬಿಗಿಯಾದರೆ, ಭಾಷಾಂತರಕಾರರನ್ನು ಪ್ರೀತಿಯಿಂದ, ಗೌರವದಿಂದ ನೋಡಲು ಸಾಧ್ಯವಾದರೆ, ಎಲ್ಲ ಭಾಷೆಯ ಒಳ್ಳೆಯ ಲೇಖಕರು ಅನುವಾದಕ್ಕೆ ಮುಂದಾದರೆ ಖಂಡಿತ ದೊಡ್ಡದಾದ ಕೊಡು ಕೊಳುವ ಆವರಣ ಸೃಷ್ಟಿಯಾಗುತ್ತದೆ. ಈ ಕುರಿತು ಒಂದು ಜಾಗೃತಿ ಈಗಾಗಲೇ ಬಂದಿದೆ ಅನಿಸುತ್ತದೆ. ಯಾಕೆಂದರೆ ಎ.ಕೆ. ರಾಮಾನುಜನ್ ಮಾಡಿರುವ ಅನುವಾದಗಳು ಮತ್ತು ಈಚೆಗೆ ವಿವೇಕ ಅವರ 'ಘಾಚರ್ ಘೋಚರ್', ವೈದೇಹಿ ಅವರ 'ಗುಲಾಬಿ ಟಾಕೀಜ್', ವಸುಧೇಂದ್ರ ಅವರ 'ಮೋಹನಸ್ವಾಮಿ', ವನಮಾಲಾ ವಿಶ್ವನಾಥ ಅವರ 'ಹರಿಶ್ಚಂದ್ರ ಕಾವ್ಯ' – ಇವೆಲ್ಲ ಕನ್ನಡದಾಚೆಗೂ ಓದುಗರನ್ನು ಸೆಳೆಯುತ್ತಿವೆ.

◆ **'ನೋ ಪ್ರೆಸೆಂಟ್ಸ್ ಪ್ಲೀಸ್' ಸಂಕಲನದ ಮೂಲಕ ನಿಮಗೆ ಹೊಸದೊಂದು ಓದುಗವರ್ಗ ಸಿಕ್ಕಿದೆ. ಅಲ್ಲಿಂದ ಬರುತ್ತಿರುವ ಸ್ಪಂದನ ಹೇಗಿದೆ?**

ತುಂಬ ಚೇತೋಹಾರಿಯಾಗಿದೆ. ಹೃದ್ಯವಾಗಿದೆ. ವಿಮರ್ಶೆಗಳು ಬಂದಿವೆ, ಸಂದರ್ಶನ ಮಾಡಿದ್ದಾರೆ, ಲೇಖನ ಬರೆದಿದ್ದಾರೆ. ಕಳೆದ ಒಂದು ವರ್ಷದಲ್ಲಿ ನಾನಾ ರೀತಿಯಿಂದ ಸ್ಪಂದನ ಸಿಕ್ಕಿದೆ. ನಾನು ಯಾವ ಕಾರಣಗಳಿಗಾಗಿ, ಏನನ್ನು ಸೂಚಿಸುವುದಕ್ಕಾಗಿ ಕಥೆ ಬರೆದಿದ್ದೇನಲ್ಲ, ಆ ಸೂಚನೆಗಳಿಗೆ ಸ್ಪಂದನಗಳು ಸಿಕ್ಕಿವೆ. ನನ್ನ ಕಥೆಗಳೆಲ್ಲ ಸ್ಮಾರ್ಟ್ ಫೋನ್ ಮುಂಚಿನ ಕಾಲದವು. ಟಚ್ ಸ್ಕ್ರೀನ್ ಹಂಗಿಲ್ಲದೆ ಮನುಷ್ಯರ ಒಡನಾಟ ಸಿಗುತ್ತಿದ್ದ ಕಾಲವದು. ಪತ್ರಗಳನ್ನು ಬರೆಯುತ್ತಿದ್ದ, ಮುಟ್ಟಿ ಮಾತನಾಡಿಸುತ್ತಿದ್ದ ಕಾಲ. ಆ ಕಾಲದಲ್ಲಿ ಬರೆದ ಕಥೆಗಳು ಈಗಿನ ಸ್ಮಾರ್ಟ್‌ಫೋನ್ ಜನರೇಷನ್‌ಗೆ ಕೂಡ ತಟ್ಟುತ್ತಿದೆ ಎಂದರೆ ಒಂದು ಗ್ರೀನ್ ಸಿಗ್ನಲ್ ಸಿಕ್ಕಂತೆ.

◆ **ಭಾಷೆ ಎನ್ನುವುದನ್ನು ನೀವು ಹೇಗೆ ಗ್ರಹಿಸುತ್ತೀರಾ? ಕಥನಕ್ರಿಯೆಯಲ್ಲಿ ಅದರ ಪಾತ್ರ ಎಂಥದ್ದು?**

ನಾವೆಲ್ಲ ಯಕ್ಷಗಾನ ನೋಡಿ ಬೆಳೆದವರು. ಅಲ್ಲಿ ನೃತ್ಯವಿದೆ, ಸಂಗೀತ ಇದೆ, ದೃಶ್ಯವಿದೆ ಮತ್ತು ಅಲ್ಲಿ ಸದ್ಯೋಜಾತವಾದಂಥ ಒಂದು ವ್ಯುತ್ಪತ್ತಿ ಇದೆ. ಅದೊಂದು ಬೌದ್ಧಿಕ ವ್ಯಾಯಾಮ. ಜಿಜ್ಞಾಸೆಯ ದೊಡ್ಡ ಆವರಣ. ಅದರಲ್ಲಿ ಮಾತು, ಧ್ವನಿ, ನಟನೆ, ವೇಷ, ಕಥೆ ಹೀಗೆ ಯಾವುದೇ ಒಂದನ್ನು ಅದರಿಂದ ಬೇರ್ಪಡಿಸಿ ನೋಡಲಿಕ್ಕೇ ಸಾಧ್ಯವಿಲ್ಲ. ಹಾಗೆಯೇ ಕಥೆ ಕೂಡ. ಇದು ಭಾಷೆ, ಇದು ಚಿಂತನೆ, ಇದು ಕಥೆ ಹೀಗೆಲ್ಲ ಪ್ರತ್ಯೇಕವಾಗಿರುವುದಿಲ್ಲ ಅದು. ಒಂದು ಅನುಭವವನ್ನು ಅರ್ಥ ಮಾಡ್ಕೊಳ್ತಾನೇ ಅದನ್ನು ಬರೆಯುತ್ತ ಹೋಗುತ್ತೇವೆ ನಾವು. ಅದೊಂಥರ ಈಜು ಕಲಿಯುತ್ತಲೇ ನದಿಯನ್ನು ದಾಟಿದ ಹಾಗೆ. ಒಂದೊಂದು ನದಿಗೆ ಒಂದೊಂದು ಈಜು ಬೇಕು. ಪ್ರತಿಸಲವೂ ಹೊಸ ನದಿ, ಹೊಸ ಈಜು. ಎರಡೂ ಒಟ್ಟಿಗೇ ಆಗುತ್ತಿರುವಂಥದ್ದು.

ಪಂಚೇಂದ್ರಿಯಗಳಷ್ಟೇ ಅಲ್ಲ, ಮನುಷ್ಯ ಹುಡುಕಿಕೊಂಡ ಆರನೇ ಜ್ಞಾನೇಂದ್ರಿಯ ಸಾಹಿತ್ಯ ಕಲೆ ಎಲ್ಲವೂ. ಅದನ್ನು ಹುಡುಕಿಕೊಂಡಿದ್ದರಿಂದ ಇಷ್ಟು ದಿನ ಕೇಳಲಿಕ್ಕೆ ಸಾಧ್ಯವಾಗದ ಹೊಸ ದನಿಗಳನ್ನು